ಕಡ್ಡಾಯ ನಮಾಝ್‌ಗಳ ನಂತರ ಹೇಳುವ

ಝಿಕ್ರ್‌ಗಳು

9

مدرسة الصفة الإسلامية

MADRASATU SUFFAH AL ISLAMIYYA

SKYWAY COMPLEX, 6TH BLOCK, KRISHNAPURA,
SURATKAL, MANGALORE - 575 014
PH: 0824-2271449 MOB: 8722695551

أَسْتَغْفِرُ اللَّهَ. اللَّهُمَّ أَنْتَ السَّلَامُ، وَمِنْكَ السَّلَامُ، تَبَارَكْتَ يَا ذَا الْجَلَالِ وَالْإِكْرَامِ.

ಅಸ್ತಗ್‌ಫಿರುಲ್ಲಾಹ್ (3 ಸಲ) ಅಲ್ಲಾಹುಮ್ಮ ಅನ್ತ ಸ್ಸಲಾಮ್, ವಮಿನ್ಕ ಸ್ಸಲಾಮ್, ತಬಾರಕ್ತ ಯಾ ಝಲ್ ಜಲಾಲಿ ವಲ್ ಇಕ್ರಾಮ್

“ನಾನು ಅಲ್ಲಾಹನಲ್ಲಿ ಕ್ಷಮೆಯಾಚಿಸುತ್ತೇನೆ. ಓ ಅಲ್ಲಾಹ್! ನೀನು ಶಾಂತಿ. ನಿನ್ನಿಂದಲೇ ಶಾಂತಿ. ಓ ಸಾರ್ವಭೌಮತ್ವ ಮತ್ತು ಘನತೆಗಳ ಒಡೆಯನೇ! ನೀನು ಅನುಗ್ರಹಪೂರ್ಣನು.” (ಮುಸ್ಲಿಂ)

لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ. اللَّهُمَّ لَا مَانِعَ لِمَا أَعْطَيْتَ، وَلَا مُعْطِيَ لِمَا مَنَعْتَ، وَلَا يَنْفَعُ ذَا الْجَدِّ مِنْكَ الْجَدُّ.

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್. (3 ಸಲ) ಅಲ್ಲಾಹುಮ್ಮ ಲಾ ಮಾನಿಅ ಲಿಮಾ ಅಅ್‌ತಯ್ತ ವಲಾ ಮುಅ್‌ತಿಯ ಲಿಮಾ ಮನಅ್‌ತ, ವಲಾ ಯನ್‌ಫಉ ಝಲ್ ಜದ್ದಿ ಮಿನ್ಕಲ್ ಜದ್ದ್

"ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಓ ಅಲ್ಲಾಹ್! ನೀನು ಕೊಟ್ಟದ್ದನ್ನು ತಡೆಯುವವರಿಲ್ಲ. ನೀನು ತಡೆ-ದುದನ್ನು ಕೊಡುವವರಿಲ್ಲ. ಸಿರಿವಂತನ ಯಾವುದೇ ಸಿರಿವಂತಿಕೆಯು ನಿನ್ನ ಬಳಿ ಪ್ರಯೋಜನಪಡುವುದಿಲ್ಲ." (ಅಲ್‌ಬುಖಾರಿ)

لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ. لَا حَوْلَ وَلَا قُوَّةَ إِلَّا بِاللَّهِ، لَا إِلَهَ إِلَّا اللَّهُ، وَلَا نَعْبُدُ إِلَّا إِيَّاهُ، لَهُ النِّعْمَةُ وَلَهُ الْفَضْلُ، وَلَهُ الثَّنَاءُ الْحَسَنُ، لَا إِلَهَ إِلَّا اللَّهُ مُخْلِصِينَ لَهُ الدِّينَ، وَلَوْ كَرِهَ الْكَافِرُونَ.

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್. ಲಾ ಹೌಲ ವಲಾ ಕುವ್ವತ ಇಲ್ಲಾ ಬಿಲ್ಲಾಹಿ, ಲಾ ಇಲಾಹ ಇಲ್ಲಲ್ಲಾಹು, ವಲಾ ನಅ್‌ಬುದು ಇಲ್ಲಾ ಇಯ್ಯಾಹು, ಲಹು ನ್ನಿಅ್‌ಮತು ವಲಹುಲ್ ಫದ್ಲು, ವಲಹು ಸ್ಸನಾಉಲ್ ಹಸನು, ಲಾ ಇಲಾಹ ಇಲ್ಲಲ್ಲಾಹು ಮುಖ್ಲಿಸೀನ ಲಹು ದ್ದೀನ ವಲವ್ ಕರಿಹಲ್ ಕಾಫಿರೂನ್

“ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು. ಅಲ್ಲಾಹನಿಂದಲ್ಲದೆ ಯಾವುದೇ ಶಕ್ತಿ ಸಾಮರ್ಥ್ಯವಿಲ್ಲ. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅವನ ಹೊರತು ಇನ್ನಾರನ್ನೂ ನಾವು ಆರಾಧಿಸುವುದಿಲ್ಲ. ಅನುಗ್ರಹ ಮತ್ತು ಔದಾರ್ಯವು ಅವನದ್ದು. ಅತ್ಯುತ್ತಮ ಪ್ರಶಂಸೆ ಅವನಿಗೇ ಮೀಸಲು. ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ನಾವು ಅವನಿಗೆ ಸಂಪೂರ್ಣ ನಿಷ್ಕಳಂಕರಾಗಿದ್ದೇವೆ. ಅವಿಶ್ವಾಸಿಗಳು ಅಸಹ್ಯಪಟ್ಟರೂ ಸರಿ.” (ಮುಸ್ಲಿಂ)

سُبْحَانَ اللَّهِ، الْحَمْدُ لِلَّهِ، اللَّهُ أَكْبَرُ. لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، وَهُوَ عَلَى كُلِّ شَيْءٍ قَدِيرٌ.

ಸುಬ್‌ಹಾನಲ್ಲಾಹ್ (33 ಸಲ), ಅಲ್‌ಹಮ್ದುಲಿಲ್ಲಾಹ್ (33 ಸಲ), ಅಲ್ಲಾಹು ಅಕ್ಬರ್ (33 ಸಲ), ಲಾ ಇಲಾಹ ಇಲ್ಲ-ಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು ವಹುವ ಅಲಾ ಕುಲ್ಲಿ ಶೈಇನ್ ಕದೀರ್

“ಅಲ್ಲಾಹು ಸಕಲ ನ್ಯೂನತೆಗಳಿಂದಲೂ ಪರಿಶುದ್ಧನು. ಅಲ್ಲಾಹನಿಗೆ ಸರ್ವಸ್ತುತಿ. ಅಲ್ಲಾಹು ಮಹಾನನು.” (ತಲಾ 33 ಸಲ) “ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು.” (ಮುಸ್ಲಿಂ)

بِسۡمِ ٱللَّهِ ٱلرَّحۡمَٰنِ ٱلرَّحِيمِ

قُلۡ هُوَ ٱللَّهُ أَحَدٌ ١ ٱللَّهُ ٱلصَّمَدُ
٢ لَمۡ يَلِدۡ وَلَمۡ يُولَدۡ ٣ وَلَمۡ

يَكُن لَّهُۥ كُفُوًا أَحَدُۢ ﴿٤﴾

﴿بِسۡمِ ٱللَّهِ ٱلرَّحۡمَٰنِ ٱلرَّحِيمِ﴾

﴿قُلۡ أَعُوذُ بِرَبِّ ٱلۡفَلَقِ ﴿١﴾ مِن شَرِّ
مَا خَلَقَ ﴿٢﴾ وَمِن شَرِّ غَاسِقٍ إِذَا وَقَبَ
﴿٣﴾ وَمِن شَرِّ ٱلنَّفَّٰثَٰتِ فِي ٱلۡعُقَدِ
﴿٤﴾ وَمِن شَرِّ حَاسِدٍ إِذَا حَسَدَ ﴿٥﴾

﴿بِسۡمِ ٱللَّهِ ٱلرَّحۡمَٰنِ ٱلرَّحِيمِ﴾

﴿قُلۡ أَعُوذُ بِرَبِّ ٱلنَّاسِ ﴿١﴾ مَلِكِ
ٱلنَّاسِ ﴿٢﴾ إِلَٰهِ ٱلنَّاسِ ﴿٣﴾ مِن
شَرِّ ٱلۡوَسۡوَاسِ ٱلۡخَنَّاسِ ﴿٤﴾ ٱلَّذِي
يُوَسۡوِسُ فِي صُدُورِ ٱلنَّاسِ ﴿٥﴾

مِنَ ٱلْجِنَّةِ وَٱلنَّاسِ ﴿٦﴾

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಕುಲ್ ಹುವಲ್ಲಾಹು ಅಹದ್, ಅಲ್ಲಾಹು ಸ್ಸಮದ್, ಲಮ್ ಯಲಿದ್ ವಲಮ್ ಯೂಲದ್, ವಲಮ್ ಯಕುಲ್ಲಹೂ ಕುಫುವನ್ ಅಹದ್.

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಕುಲ್ ಅಊರುಝು ಬಿರಬ್ಬಿಲ್ ಫಲಕ್, ಮಿನ್ ಶರ್ರಿ ಮಾ ಖಲಕ್, ವಮಿನ್ ಶರ್ರಿ ಗಾಸಿಕಿನ್ ಇದಾ ವಕಬ್, ವಮಿನ್ ಶರ್ರಿ ನ್ನಫ್ಫಾಸಾತಿ ಫಿಲ್ ಉಕದ್, ವಮಿನ್ ಶರ್ರಿ ಹಾಸಿದಿನ್ ಇದಾ ಹಸದ್.

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ಕುಲ್ ಅಊರುಝು ಬಿರಬ್ಬಿ ನ್ನಾಸ್, ಮಲಿಕಿ ನ್ನಾಸ್, ಇಲಾಹಿ ನ್ನಾಸ್, ಮಿನ್ ಶರ್ರಿಲ್ ವಸ್ವಾಸಿಲ್ ಖನ್ನಾಸ್, ಅಲ್ಲಝೀ ಯುವಸ್ವಿಸು ಫೀ ಸುದೂರಿ ನ್ನಾಸ್, ಮಿನಲ್ ಜಿನ್ನತಿ ವನ್ನಾಸ್) (ಎಲ್ಲ ನಮಾಝ್‌ಗಳ ನಂತರ)

“ಪರಮ ದಯಾಮಯನೂ ಕರುಣಾನಿಧಿಯೂ ಆದ

ಅಲ್ಲಾಹನ ನಾಮದಿಂದ. ಹೇಳಿರಿ: ಅವನು ಅಲ್ಲಾಹು ಏಕೈಕನು. ಅವನು ನಿರಪೇಕ್ಷನು. ಸರ್ವವೂ ಅವನನ್ನೇ ಆಶ್ರಯಿಸಿಕೊಂಡಿವೆ. ಅವನಿಗೆ ಯಾವುದೇ ಸಂತತಿಯಿಲ್ಲ. ಅವನು ಯಾರದೇ ಸಂತತಿಯೂ ಅಲ್ಲ. ಅವನಿಗೆ ಸರಿಸಮಾನರಾಗಿ ಯಾರೂ ಇಲ್ಲ."

"ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ. ಹೇಳಿರಿ: ಪ್ರಭಾತದ ರಬ್ಬಿನಲ್ಲಿ ನಾನು ರಕ್ಷೆ ಬೇಡುತ್ತೇನೆ. ಅವನು ಸೃಷ್ಟಿಸಿದವುಗಳ ಕೆಡುಕಿನಿಂದ. ಇರುಳು ಕವಿಯುವಾಗ ರಾತ್ರಿಯ ಕೆಡುಕಿನಿಂದ. ಗಂಟುಗಳಿಗೆ ಊದುವ ಮಾಟಗಾತಿ ಸ್ತ್ರೀಯರ ಕೆಡುಕಿನಿಂದ. ಅಸೂಯೆಗಾರನು ಅಸೂಯೆಪಡುವಾಗ ಅವನ ಕೆಡುಕಿನಿಂದ."

"ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ. ಹೇಳಿರಿ: ಮನುಷ್ಯರ ರಬ್ಬಿನಲ್ಲಿ, ಮನುಷ್ಯರ ಅಧಿಪತಿಯಲ್ಲಿ ಮತ್ತು ಮನುಷ್ಯರ

ಆರಾಧ್ಯನಲ್ಲಿ, ಮನುಷ್ಯರ ಹೃದಯದಲ್ಲಿ ದುರ್ಬೋಧನೆ ಮಾಡುವ ಜಿನ್ನ್‌ಗಳಲ್ಲಿ ಮತ್ತು ಮನುಷ್ಯರಲ್ಲಿ ಸೇರಿದ ಹಿಂದಕ್ಕೆ ಸರಿಯುವ ದುರ್ಬೋಧಕರ ಕೆಡುಕಿನಿಂದ ನಾನು ಸಂರಕ್ಷಣೆ ಬೇಡುತ್ತೇನೆ." (ಅಬೂದಾವೂದ್)

﴿ ٱللَّهُ لَآ إِلَٰهَ إِلَّا هُوَ ٱلۡحَيُّ ٱلۡقَيُّومُۚ لَا
تَأۡخُذُهُۥ سِنَةٞ وَلَا نَوۡمٞۚ لَّهُۥ مَا فِي ٱلسَّمَٰوَٰتِ وَمَا
فِي ٱلۡأَرۡضِۗ مَن ذَا ٱلَّذِي يَشۡفَعُ عِندَهُۥٓ إِلَّا
بِإِذۡنِهِۦۚ يَعۡلَمُ مَا بَيۡنَ أَيۡدِيهِمۡ وَمَا خَلۡفَهُمۡۖ
وَلَا يُحِيطُونَ بِشَيۡءٖ مِّنۡ عِلۡمِهِۦٓ إِلَّا بِمَا شَآءَۚ
وَسِعَ كُرۡسِيُّهُ ٱلسَّمَٰوَٰتِ وَٱلۡأَرۡضَۖ وَلَا يَـُٔودُهُۥ
حِفۡظُهُمَاۚ وَهُوَ ٱلۡعَلِيُّ ٱلۡعَظِيمُ ٢٥٥ ﴾

ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಕಯ್ಯೂಮ್, ಲಾ ತಅ್‌ಖುಝುಹೂ ಸಿನತುನ್ ವಲಾ

ನೌಮ್, ಲಹೂ ಮಾ ಫಿ ಸ್ಸಮಾವಾತಿ ವಮಾ ಫಿಲ್ ಅರ್ದ್, ಮನ್ ಝುಲ್ಲದೀ ಯಶ್‌ಫಉ ಇನ್ದಹೂ ಇಲ್ಲಾ ಬಿಇಝ್‌ನಿಹ್, ಯಅ್‌ಲಮು ಮಾ ಬೈನ ಐದೀಹಿಮ್ ವಮಾ ಖಲ್ಫಹುಮ್ ವಲಾ ಯುಹೀತೂನ ಬಿಶೈಇನ್ ಮಿನ್ ಇಲ್ಮಿಹೀ ಇಲ್ಲಾ ಬಿಮಾ ಶಾಅ್, ವಸಿಅ ಕು-ರ್ಸಿಯ್ಯುಹು ಸ್ಸಮಾವಾತಿ ವಲ್ ಅರ್ದ್, ವಲಾ ಯಊದುಹೂ ಹಿಫ್‌ಝುಹುಮಾ, ವಹುವಲ್ ಅಲಿ-ಯ್ಯುಲ್ ಅಝೀಮ್ (ಎಲ್ಲ ನಮಾಝ್‌ಗಳ ನಂತರ)

“ಅಲ್ಲಾಹು. ಅವನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ. ಅವನು ನಿರಂತರ ಜೀವಿಸುವವನು. ಸ್ವಯಂ ಅಸ್ತಿತ್ವದ-ಲ್ಲಿರುವವನು ಮತ್ತು ಇತರೆಲ್ಲವನ್ನೂ ಸಂರಕ್ಷಿಸಿ ನಿಯಂ-ತ್ರಿಸುವವನು. ತೂಕಡಿಕೆಯೋ ನಿದ್ದೆಯೋ ಅವನನ್ನು ಹಿಡಿದುಕೊಳ್ಳುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿ-ಯಲ್ಲಿರುವುದೆಲ್ಲವೂ ಅವನದ್ದು. ಅವನ ಅಪ್ಪಣೆಯಿಲ್ಲ-ದೆ ಅವನ ಬಳಿ ಶಿಫಾರಸು ಮಾಡುವವರು ಯಾರು?

ಅವರಿಗೆ ಈಗಾಗಲೇ ಸಂಭವಿಸಿರುವುದನ್ನು ಮತ್ತು ಮುಂದೆ ಸಂಭವಿಸಲಿರುವುದನ್ನು ಅವನು ಅರಿಯುತ್ತಾನೆ. ಅವನು ಇಚ್ಛಿಸಿದ್ದನ್ನು ಹೊರತು ಅವನ ಜ್ಞಾನದಿಂದ ಏನನ್ನೂ ಸೂಕ್ಷ್ಮವಾಗಿ ಅರಿಯಲು ಅವರಿಗೆ ಸಾಧ್ಯವಿಲ್ಲ. ಅವನ ಕುರ್ಸೀ ಭೂಮ್ಯಾಕಾಶಗಳನ್ನು ಆವರಿಸಿಕೊಂಡಿದೆ. ಅವುಗಳನ್ನು ಸಂರಕ್ಷಿಸುವುದು ಅವನಿಗೆ ಭಾರವಿರುವ ಸಂಗತಿಯೇ ಅಲ್ಲ. ಅವನು ಅತ್ಯುನ್ನತನೂ ಮಹಾನನೂ ಆಗಿದ್ದಾನೆ.” (ಅಮಲುಲ್ ಯೌಮಿ ವಲ್ಲೈಲ)

لَا إِلَهَ إِلَّا اللَّهُ وَحْدَهُ لَا شَرِيكَ لَهُ، لَهُ الْمُلْكُ وَلَهُ الْحَمْدُ، يُحْيِي وَيُمِيتُ، وَهُوَ عَلَى كُلِّ شَيْءٍ قَدِيرٌ.

ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕ ಲಹೂ, ಲಹುಲ್ ಮುಲ್ಕು ವಲಹುಲ್ ಹಮ್ದು, ಯುಹ್ಯೀ ವಯುಮೀತು, ವಹುವ ಅಲಾ ಕುಲ್ಲಿ ಶೈಇನ್ ಕದೀರ್

(ಮಗ್ರಿಬ್ ಮತ್ತು ಫಜ್ರ್ ನಮಾಝ್‌ನ ಬಳಿಕ 10 ಸಲ)

"ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲ, ಅವನು ಏಕೈಕನು ಮತ್ತು ಸಹಭಾಗಿಗಳಿಲ್ಲದವನು. ಆಧಿಪತ್ಯ ಅವನದ್ದು ಮತ್ತು ಸರ್ವಸ್ತುತಿ ಅವನಿಗೆ. ಅವನು ಜೀವ-ವನ್ನು ಮತ್ತು ಮರಣವನ್ನು ನೀಡುತ್ತಾನೆ. ಅವನು ಎಲ್ಲ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನು." (ಅತ್ತಿರ್ಮಿದಿ)

اللَّهُمَّ إِنِّي أَسْأَلُكَ عِلْمًا نَافِعًا وَرِزْقًا طَيِّبًا وَعَمَلًا مُتَقَبَّلًا.

ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಇಲ್ಮನ್ ನಾಫಿಅನ್ ವರಿಝ್ಕುನ್ ತಯ್ಯಿಬನ್ ವಅಮಲನ್ ಮುತಕಬ್ಬಲಾ (ಫಜ್ರ್ ನಮಾಝ್ ನಿರ್ವಹಿಸಿ ಸಲಾಂ ಹೇಳಿದ ಬಳಿಕ)

"ಓ ಅಲ್ಲಾಹ್! ನಾನು ನಿನ್ನಲ್ಲಿ ಪ್ರಯೋಜನಕಾರಿ ಜ್ಞಾನ-ವನ್ನು, ಶುದ್ಧವಾದ ಆಹಾರವನ್ನು ಮತ್ತು ಸ್ವೀಕೃತವಾದ

ಕರ್ಮಗಳನ್ನು ಬೇಡುತ್ತೇನೆ." (ಇಬ್ನ್ ಮಾಜ)

الحركة النصيحة الإسلامية

ANNASEEHA ISLAMIC MOVEMENT

SURATKAL, MANGALORE - 575 014

MOB: 9731593091 / 9945171612

Jamiyathe Ahle Hadees
Mangalore